**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 21 ಪ್ರಾ.ಸಾ. : 14**

ಸಾಕ್ಷಿಯ ಹೆಸರು : ಸಂಜೀವ್
ತಂದೆಯ ಹೆಸರು : ಗೋಪಾಲ ನಾಯಕ
ವಯಸ್ಸು : 39 ವರ್ಷ
ಉದ್ಯೋಗ : ಶಾಖಾ ವ್ಯವಸ್ಥಾಪಕರು , ರಿಲಾಯನ್ಸ್ ನಿಪ್ಪೋನ
ವಾಸ : ಅಂಕೋಲಾ

**ದಿನಾಂಕಃ 18-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ</u>**

1. ನಾನು ಹಿಂದೆ ರಿಲಾಯನ್ಸ್ ಜೀವ ವಿಮಾ ಕಂಪನಿಯಲ್ಲಿ 2007 ರಿಂದ 2013 ರವರೆಗೆ ಮೊದಲಿಗೆ ಮಾರಾಟ ವ್ಯವಸ್ಥಾಪಕ ಆಗಿ ನಂತರ ಪ್ರಭಾರ ಶಾಖಾ ವ್ಯವಸ್ಥಾಪಕ ಆಗಿ ಕೆಲಸ ಮಾಡಿರುತ್ತೇನೆ. ದಿನಾಂಕ 13.12.2010 ರ ಪತ್ರದ ಪ್ರಕಾರ ಕರ್ನಾಟಕ ಲೋಕಾಯುಕ್ತ ಕಾರವಾರದ ಆರಕ್ಷಕ ನಿರೀಕ್ಷಕರು ನನಗೆ ನರೇಂದ್ರ ಹಿತ್ತಲಮಕ್ಕಿ ಎನ್ನುವವರ ವಿಮಾ ಪಾಲಿಸಿ ವಿವರಗಳನ್ನು ಕೋರಿದರು. ಈಗ ಆ ಪತ್ರವನ್ನು ನೋಡಿರುತ್ತೇನೆ. ಆ ಪತ್ರವನ್ನು ನಿ.ಪಿ. 159 ಎಂದು ಗುರುತಿಸಲಾಯಿತು. ಆ ಬಗ್ಗೆ ನಾನು ಅವರು ಕೇಳಿದ್ದ ಮಾಹಿತಿಯನ್ನು ಲಿಖಿತವಾಗಿ ನೀಡಿರುತ್ತೇನೆ. ಈಗ ನಾನು ನೀಡಿದ ಮಾಹಿತಿ ಪತ್ರ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ಪತ್ರವನ್ನು ನಿ.ಪಿ. 160 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 160(ಎ) ಎಂದು ಗುರುತಿಸಲಾಯಿತು. ಅದರಲ್ಲಿ ನರೇಂದ್ರ ಜಿ. ಹಿತ್ತಲಮಕ್ಕಿ ಹೆಸರಿಗೆ ಇರುವ ನಮ್ಮ ಸಂಸ್ಥೆಯ ವಿಮಾ ಪಾಲಿಸಿ ಸಂಖ್ಯೆ 10607778 ಎಂದು , ಅದನ್ನು ದಿನಾಂಕ 31.03.2007 ರಲ್ಲಿ ನೀಡಲಾಗಿದ್ದು ಅದರ ಮುಖ ಬೆಲೆ ರೂ. 50,000/- ಆಗಿರುತ್ತದೆ. ಅದರ ಅವಧಿ ದಿನಾಂಕ 31.03.2016 ರಂದು ಪೂರ್ಣಗೊಳ್ಳುತ್ತದೆ ಹಾಗೂ ಸದರಿ ಪಾಲಿಸಿದಾರರು ಆ ಪಾಲಿಸಿ ಪಡೆಯಲು ರೂ. 30,000/- ಅನ್ನು ಒಟ್ಟಾರೆಯಾಗಿ ಅಂದರೆ ವರ್ಷಕ್ಕೆ ರೂ. 10,000/- ದಂತೆ ಮೂರು ವರ್ಷ ಪಾವತಿ ಮಾಡಿದ್ದಾರೆ. ಆ ಮೂಲಕ ಅವರು ಪಾವತಿ ಮಾಡಬೇಕಾಗಿದ್ದ ಪೂರ್ತಿ ಮೊತ್ತ ಮೂರು ವರ್ಷಕ್ಕೆ ಆಗಿರುತ್ತದೆ ಎಂದು

ತಿಳಿಸಿರುತ್ತೇನೆ ಹಾಗೂ ಮತ್ತೊಂದು ಪಾಲಿಸಿ ಸಂಖ್ಯೆ 10388902 ಮೇಲ್ಕಂಡರವರ ಪತ್ನಿ ಕಲಾ ಎನ್. ಹಿತ್ತಲಮಕ್ಕಿ ಹೆಸರಿಗೆ ಇದೆ . ಅದನ್ನು ದಿನಾಂಕ 16.11.2006 ರಂದು ನೀಡಲಾಗಿದೆ . ಅದರ ಮುಖ ಬೆಲೆ ರೂ. 2,50,000/-. ಅದರ ಅವಧಿ ದಿನಾಂಕ 16.11.2015 ರಂದು ಇರುತ್ತದೆ ಹಾಗೂ ಆ ಸಮಯಕ್ಕೆ ರೂ. 1,50,000/- ಅನ್ನು ಆ ಪಾಲಿಸಿ ಬಗ್ಗೆ ಪಾಲಿಸಿದಾರರು ಪಾವತಿ ಮಾಡಿದ್ದಾರೆ. ಆ ವಿಮೆ ಪಾಲಿಸಿಯ ಅಡಿಯಲ್ಲಿ ರೂ. 1,50,000/- ಕ್ಕೆ ವಿಮೆ ನೀಡಲಾಗಿರುತ್ತದೆ ಎಂದು ಮಾಹಿತಿ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎನ್ ಎನ್ ರವರಿಂದ**

2. ನಿ.ಪಿ. 160 ರಲ್ಲಿ ಹೇಳಿರುವ 2 ನೇ ಪಾಲಿಸಿ ಕಲಾ ಎನ್. ಹಿತ್ತಲಮಕ್ಕಿ ಹೆಸರಿಗೆ ಇರುವುದಕ್ಕೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ